
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ

ಪುಟ : ೧ ಸಂಪುಟ : ೭೦ ಸಂಚಿಕೆ : ೦೫

**15-04-2024 ಚೈತ್ರ ಮಾಸ : ಶುಕ್ಲ ಪಕ್ಷ ಸೋಮವಾರ**

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ಶ್ರೀ ಕರ್ಮಯೋಗಿ ಚಾರುಕೀರ್ತಿ ನೆನಪು ಅಜರಾಮರ'



ಜೈನ ಸಮಾಜದ ಕಣ್ಮಣಿ, ದಿಗ್ದರ್ಶಕ, ಆಧುನಿಕ ಶ್ರವಣಬೆಳಗೊಳದ ನಿರ್ಮಾತೃ ಗುರುಗಳಾದ ಕರ್ಮಯೋಗಿ ಸ್ವಸ್ತಿಶ್ರೀ ಚಾರುಕೀರ್ತಿಗಳು ನಮ್ಮನಗಲಿ ಒಂದು ವರ್ಷ ಕಳೆದಿದೆ. ದಿನಗಳು ಕ್ಷಣ ಮಾತ್ರದಂತೆ ಉರುಳಿದರು ಅವರು ಮನಸ್ಸಲ್ಲಿ ಅಚ್ಚಳಿಯದೇ ಶಾಶ್ವತವಾಗಿ ಉಳಿದಿದ್ದಾರೆ. 70ರ ದಶಕದಲ್ಲಿ ಯೌವನಾವಸ್ಥೆಯಲ್ಲಿಯೇ ಶ್ರವಣಬೆಳಗೊಳ ಗುರು ಪೀಠವನ್ನು ಅಲಂಕರಿಸಿದರು ಎಂಬುದು ಅಂದು ಜನರಿಗೆ ಸಂಭ್ರಮವಾಗಿದ್ದರೂ, ಅವರ ಹೆಗಲ ಮೇಲೆ ಬಂದಂತ ಗುರುತರ ಹೊಣೆಗಾರಿಕೆ ಮಾತ್ರ ಬಹು ಭಾರವಾಗಿದ್ದುದು. ಬೆಳಗೊಳದ ಸುಮಾರು 40 ಬಸದಿಗಳ ಜೀರ್ಣೋದ್ಧಾರ, ನಿರ್ವಹಣೆ, ಜೊತೆಗೆ ನವ-ನವೀನ ಕನಸುಗಳನ್ನ ಸಾಕಾರ ಮಾಡುತ್ತಾ ಬಂದರು. ಭಗವಾನ್ ಬಾಹುಬಲಿ ಸ್ವಾಮಿಯ ಪ್ರತಿಷ್ಠಾಪನೆಯ ಸಾವಿರ ವರ್ಷದ ಸಂಭ್ರಮ ಇಡೀ ವಿಶ್ವವೇ ಮೆಚ್ಚುವ ರೀತಿ ಮಾಡಿ ತೋರಿದರು. ನಂತರ ಧಾರ್ಮಿಕ ತಾಣವಾಗಿದ್ದ ಕ್ಷೇತ್ರವನ್ನು ಶಿಕ್ಷಣ ಕಾಶಿಯನ್ನಾಗಿ ಬೆಳೆಸಿದರು. ಅವರು ಅಂದು ಸ್ಥಾಪಿಸಿದ ಸಂಸ್ಥೆಗಳಲ್ಲಿ ಸಾವಿರಾರು ಬಡ ಮಕ್ಕಳು ಶಿಕ್ಷಣ ಪಡೆದು ಉತ್ತಮ ಸಮಾಜ ನಿರ್ಮಾಣಕ್ಕಾಗಿ ಕಾರಣರಾದರು. ನಿರಂತರ ಕ್ಷೇತ್ರದ ಪ್ರಗತಿ, ಸಾಮಾಜಿಕ ಕಳಕಳಿ, ಧರ್ಮ ಜಾಗೃತಿಗೆ ಒತ್ತು ನೀಡಿ ಮಾನವ ಸಮಾಜಕ್ಕೆ "ಕರ್ಮಯೋಗಿ" ಯೆನಿಸಿದರು. ಶ್ರವಣಬೆಳಗೊಳ ಕ್ಷೇತ್ರವನ್ನು ಉತ್ತರ ಭಾರತ-ದಕ್ಷಿಣ ಭಾರತದ ಸೇತುವಾಗಿ ಅಭಿವೃದ್ಧಿ ಪಡಿಸಿದರು. ಬೆಳಗೊಳವನ್ನು ಸಾಧು-ಸಂತರ ನೆಲೆ ಬೀಡಾಗಿ ಆಧ್ಯಾತ್ಮ ವಿಕಾಸ ಮಾಡಿಕೊಂಡರು.

ನಮ್ಮಂತ ನೂರಾರು ಜನ ಶಿಷ್ಯರಿಗೆ ಗುರುವಾಗಿ ವಿದ್ಯಾ-ಬುದ್ಧಿ ಜೊತೆಗೆ ಸ್ಥಾನ-ಮಾನವನ್ನು ಕೊಡಿಸಿದ್ದಾರೆ. ಅನೇಕ ಜೈನ ಕ್ಷೇತ್ರಗಳ ಉದ್ಧಾರಕ್ಕೆ ಕಾರಣಕರ್ತರಾಗಿ ಜೈನ ಸಮಾಜದ ಮಹಿಮೆ, ಹಿರಿಮೆಯನ್ನ ಹೆಚ್ಚಿಸಿದ ಕೀರ್ತಿ ಪುರುಷ. ಪ್ರಾಚೀನ ಪರಂಪರೆಯ ರಕ್ಷಣೆ, ಸಂರಕ್ಷಣೆ, ಸಂಸ್ಕೃತಿಯ ಬೆಳಗುವ ಪ್ರತೀಕವಾಗಿ ಬೆಳೆದರು. ಕರ್ನಾಟಕದಲ್ಲಿ ಜೈನ ಸಮಾಜದ ಪ್ರಗತಿಗೆ ಕಾರಣಕರ್ತರಾದರು. ಇಂದು ಶ್ರವಣಬೆಳಗೊಳ ಒಂದು ಧಾರ್ಮಿಕ ಕ್ಷೇತ್ರವಾಗಿ ಬೆಳೆದಿರುವುದಲ್ಲದೆ ಅಭಿವೃದ್ಧಿ ಹೊಂದಿರುವ ಉತ್ತಮ ನಗರ ರೂಪದಲ್ಲಿ ವಿಕಸಿತವಾಗುತ್ತದೆ. ಕರ್ಮಯೋಗಿ ಚಾರುಕೀರ್ತಿ ಗುರುಗಳಲ್ಲಿದ್ದ ತ್ಯಾಗ ಭಾವನೆ ಉದಾರವಾದದ್ದು. ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ವಿದ್ವಾಂಸರು, ತ್ಯಾಗಿಗಳು, ನಿರಾಶ್ರಿತರಿಗೆ ಅವರು ಮಾಡಿದಷ್ಟು ಸಹಾಯ ಕಣ್ಣಾರೆ ನೋಡಿರುತ್ತೇವೆ. ಬೆಳಗೊಳ ಗ್ರಾಮಕ್ಕೆ ಒಳಚರಂಡಿ ವ್ಯವಸ್ಥೆ, ನಿರಂತರ ವಿದ್ಯುತ್, ನಿರಂತರ ಕುಡಿಯುವ ನೀರಿನ ವ್ಯವಸ್ಥೆ, ನಿರಂತರ ಸಂಪರ್ಕ ಸಾಧನಗಳ ಜೊತೆಗೆ ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಮುಂತಾದ ಅನೇಕ ಸಾರ್ವಜನಿಕ ಸೇವೆಗಳು ಬರುವಂತೆ ಶ್ರಮಿಸಿದರು. ಅವರ ಮಾತೃ ಹೃದಯಿ ವಾತ್ಸಲ್ಯ, ಪಿತೃ ಸ್ವರೂಪಿ, ಧೈರ್ಯ ಪ್ರೋತ್ಸಾಹ ನೀಡುವಿಕೆ ಕರುಣಾಮಯಿಯಾಗಿ ನಮ್ಮ ಜೀವನದಲ್ಲಿ ಅವರ ನೆನಪು ಅಮರತ್ವವಾಗಿ ನೆಲೆಸಿದೆ. ಗುರುವಿನ ಮಹಿಮೆ ಮಹತ್ವ ಮತ್ತಷ್ಟು ಅರಿವಾಗುತ್ತಿದೆ. ಒಂದರ್ಥದಲ್ಲಿ ಜೈನ ಸಮಾಜದ ನೇತೃತ್ವ ಶಕ್ತಿ ಕುಂದಿದೆ ಅನಿಸಿದರು ಪೂಜ್ಯ ಗುರುಗಳು ತೋರಿರುವ ಮಾರ್ಗದರ್ಶನದಲ್ಲಿ ಸಾಗಿದರೆ ಎಂದಿಗೂ ಪ್ರಗತಿ ಸಾಧ್ಯವಿದೆ.

**ಸದಾ ಗುರುವಿನ ಗುಲಾಮನಾಗಿ ಅಮರನಾಗಲು ಬಯಸುತ್ತೇವೆ.**

**ಪಾದಗಳಿಗೆ ಸದಾ ನಮನಗಳು.**

(ಏಪ್ರಿಲ್ 09, 2024ರ ವಿಜಯವಾಣಿ ಪತ್ರಿಕೆಯ ಚಾರುಸ್ಮರಣೆ ವಿಶೇಷ ಪುರವಣಿಯಲ್ಲಿ ಹೊಂಬುಜ ಶ್ರೀಗಳ ಲೇಖನ)

ಶ್ರೀ ಪಾರ್ಶ್ವನಾಥ ಸ್ವಾಮಿ ಶ್ರೀ ಪದ್ಮಾವತಿ ದೇವಿ ಮಹಾರಥಾರೋಹಣ

## 'ಭಕ್ತವೃಂದ ಭಕ್ತಿ ಸಿಂಚನ : ಜೈಕಾರ ಸಮೃದ್ಧ ವೃದ್ಧಿ-ಆರೋಗ್ಯ-ಸಾಮರಸ್ಯಕ್ಕಾಗಿ ಪ್ರಾರ್ಥನೆ ಸತ್ಫಲ ನೀಡಲಿ'

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



WWW.HOMBUJAPADMAVATI.ORG

**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಶ್ರೀ ಪದ್ಮಾವತಿ ದೇವಿ ರಥಾರೋಹಣವು ಪೂರ್ವಪರಂಪರೆಯಂತೆ ಮೂಲನಕ್ಷತ್ರದ ಶುಭ ಮುಹೂರ್ತದಲ್ಲಿ ನಿತ್ಯವಿಧಿ ಸಹಿತ (1.05 ಗಂಟೆಗೆ) ವಿಧಿವತ್ತಾಗಿ ನೆರವೇರಿತು. ಜೈ ಪಾರ್ಶ್ವನಾಥ ಸ್ವಾಮಿ, ಜಯ ಶ್ರೀ ಪದ್ಮಾವತಿ ದೇವಿ ಎಂಬ ಭಕ್ತವೃಂದದವರ ಜಯಘೋಷ, ವಾದ್ಯಗೋಷ್ಠಿ, ಚೆಂಡೆ, ಡೋಲು, ನಾನಾ ಘಂಟಾನಾದಗಳಿಂದ ಶ್ರೀ ಕ್ಷೇತ್ರದಲ್ಲಿ ಧರ್ಮಪ್ರಜ್ಞೆಯ ನೈಜ ಚಿತ್ರಣ ಕಂಡು ಬಂದಿತ್ತು. ಪ್ರಸಾದ ಬೇಡಿಕೆ ಬಳಿಕ ರಥಯಾತ್ರೆಗೆ ಚಾಲನೆ ನೀಡಲಾಯಿತು.

ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು, ಮುನಿಶ್ರೀ 108 ಅಮರಕೀರ್ತಿ ಮಹಾರಾಜರು, ಆರ್ಯಿಕಾ 105 ಪದ್ಮಶ್ರೀ ಮಾತಾಜಿಯವರ ಸಾನಿಧ್ಯದಲ್ಲಿ ರಥಾರೋಹಣ ವಿಧಿಗಳು ಸಾಂಪ್ರದಾಯಿಕವಾಗಿ ನೆರವೇರಿದವು. ಹೊಂಬುಜ ಶ್ರೀ ಜೈನ ಮಠದ

ಕುಂದಾದ್ರಿ ಕ್ಷೇತ್ರಕ್ಕೆ ಯುಗಳ ಮುನಿಗಳ ಆಗಮನ-ಕಲಿಕುಂಡ ಯಂತ್ರಾರಾಧನೆ

## "ಕುಂದಾದ್ರಿ ಕ್ಷೇತ್ರ: ಭಾವಶುದ್ಧಿಯ ಪ್ರೇರೇಪಿಸುವ ದಿವ್ಯಸನ್ನಿಧಿ"

-ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು



**ಕುಂದಾದ್ರಿ :** ಇಲ್ಲಿಯ ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ ಮತ್ತು ಆಚಾರ್ಯ ಕುಂದಕುಂದರ ಪಾದಚರಣವಿರುವ ಕ್ಷೇತ್ರವು ಸರ್ವರಿಗೂ ಭಾವಶುದ್ಧಿ ಮಾಡುವ ದಿವ್ಯ ಸನ್ನಿಧಿ ಎಂದು ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ತಿಳಿಸಿದರು. ಜೈನ ತೀರ್ಥ ಕ್ಷೇತ್ರಗಳಲ್ಲಿ ಕರ್ನಾಟಕದ ಕುಂದಾದ್ರಿ ಬೆಟ್ಟವು ಅಪೂರ್ವ ಧರ್ಮಸ್ಪರ್ಶವನ್ನು ನೀಡುವುದೆಂದರು.

ಮುನಿಶ್ರೀ 108 ಅಮರಕೀರ್ತಿ ಮಹಾರಾಜರು ಮಾತನಾಡಿ, ಆತ್ಮಪರಿಶುದ್ಧತೆಗಾಗಿ ಜೈನ ತೀರ್ಥಕ್ಷೇತ್ರಗಳು ಪ್ರಕೃತಿಯ ಭವ್ಯತೆಯ ದರ್ಶನ ಮಾಡಿಸುವಂತೆಯೇ ಆತ್ಮಕಲ್ಯಾಣದ ಧ್ಯಾನಕೇಂದ್ರಗಳಾಗಿವೆ ಎಂದರು.

ಹೊಂಬುಜ ಶ್ರೀಮಠದ ಅಧೀನ ಕ್ಷೇತ್ರವಾಗಿರುವ ಕುಂದಾದ್ರಿಯಲ್ಲಿ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು

2ನೇ ಪುಟಕ್ಕೆ

### ಯುಗಳ ಮುನಿಶ್ರೀಗಳ ಪಾದಾರ್ಪಣೆ

## ಹೊಂಬುಜ ವಾರ್ಷಿಕ ರಥೋತ್ಸವ ಪೂರ್ವ ಧ್ವಜಾರೋಹಣ



**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ದರ್ಶನಕ್ಕಾಗಿ ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹಾಗೂ ಮುನಿಶ್ರೀ 108 ಅಮರಕೀರ್ತಿ ಮಹಾರಾಜರು ಪಾದಾರ್ಪಣೆ ಮಾಡಿದರು. ಸಾಲಾಂಕೃತ ಮೆರವಣಿಗೆಯಲ್ಲಿ ಮುನಿಶ್ರೀಯವರನ್ನು ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಪರಂಪರಾಗತವಾಗಿ ಸ್ವಾಗತಿಸಿ, ಬರಮಾಡಿಕೊಂಡರು. ಜಿನಮಂದಿರಗಳ ದರ್ಶನ ಪಡೆದ ಮುನಿಶ್ರೀಯವರು ವಾರ್ಷಿಕ ರಥಯಾತ್ರಾ ಮಹೋತ್ಸವದ ದಿವ್ಯ ಸಾನಿಧ್ಯ ವಹಿಸಿದ್ದರು.

ಇಂದ್ರಪ್ರತಿಷ್ಠೆ, ವಿಮಾನಶುದ್ಧಿ, ಯಕ್ಷಪ್ರತಿಷ್ಠೆ, ಧ್ವಜಾರೋಹಣ, ಮಹಾನೈವೇದ್ಯ ಪೂಜೆ, ನಾಂದಿಮಂಗಲ, ವಾಸ್ತುಶಾಂತಿ ವಿಧಿಗಳು ಸಾಂಗವಾಗಿ ಆಗಮೋಕ್ತ ಶಾಸ್ತ್ರದಂತೆ ಜರುಗಿದವು.

ರಾತ್ರಿ ನಾಗವಾಹನೋತ್ಸವದಲ್ಲಿ ಭಕ್ತಾದಿಗಳು ಪಾಲ್ಗೊಂಡರು. ಪರಮಪೂಜ್ಯ ಶ್ರೀಗಳವರು ಶ್ರೀಕ್ಷೇತ್ರದ ರಥೋತ್ಸವವು ಸಮುದಾಯದಲ್ಲಿ ಶಾಂತಿ ಸಾಮರಸ್ಯ ಬೇರೂರಲಿ ಎಂಬ ಸಂದೇಶ ಸಾರುತ್ತದೆ ಎಂದು ಭಕ್ತರನ್ನು ಹರಸಿದರು. ಪೂಜಾ, ಭೋಜನ ಸೇವಾ ಕರ್ತರಾದ ರಚನಾ ಜೈನ್, ಸಂಜೀವ ಜೈನ್, ಅಶೋಕ ಕಂಪನಿ, ದೆಹಲಿಯವರು ಉಪಸ್ಥಿತರಿದ್ದರು. ಶ್ರೀಮಠದ ಆಡಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ್ ಇದ್ದರು.





WWW.HOMBUJAPADMAVATI.ORG

### ವಿದ್ಯಾರ್ಥಿ ನಿಲಯಕ್ಕೆ ಪ್ರವೇಶವಕಾಶ

**ವರಂಗ : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರೀಕ್ಷೇತ್ರ ವರಂಗ ಜೈನ ಮಠದಲ್ಲಿ ನಡೆಯುತ್ತಿರುವ ವಿದ್ಯಾಪೀಠಕ್ಕೆ 2024-25ನೇ ಸಾಲಿನ ಪ್ರವೇಶ ಪ್ರಾರಂಭಿಸಲಾಗಿದ್ದು, 8 ರಿಂದ 10ನೇ ತರಗತಿಯ, ಪದವಿಪೂರ್ವ ಹಾಗೂ ಪದವಿ ವಿದ್ಯಾಭ್ಯಾಸ ಮಾಡಲು ಜೈನ ವಿದ್ಯಾರ್ಥಿಗಳಿಗೆ ಲೌಕಿಕ ಹಾಗೂ ಧಾರ್ಮಿಕ ಶಿಕ್ಷಣವನ್ನು ಉಚಿತವಾಗಿ ನೀಡಲಾಗುವುದು. ಮೂಲ ದಾಖಲೆಗಳೊಂದಿಗೆ ಶ್ರೀಮಠದ ಆಡಳಿತ ಮಂಡಳಿಯನ್ನು ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 8762785044, 8123924492, 9481249127, 9481944083,**

### ಶ್ರೀ ಪಾರ್ಶ್ವನಾಥ ಸ್ವಾಮಿ ಶ್ರೀ ಪದ್ಮಾವತಿ ದೇವಿ ಮಹಾರಥಾರೋಹಣ

**1ನೇ ಪುಟದಿಂದ**

ಪಟ್ಟಾಚಾರ್ಯವರ್ಯರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ದಿವ್ಯ ಸಾನಿಧ್ಯ, ನೇತೃತ್ವ, ಮಾರ್ಗದರ್ಶನದಲ್ಲಿ ಧಾರ್ಮಿಕ ವಿಧಿಗಳು ಸಂಪನ್ನಗೊಂಡವು.

ಭಕ್ತರ ಸಂಭ್ರಮ, ಸಡಗರ, ಧನ್ಯತಾಭಾವ ಶ್ರೀಕ್ಷೇತ್ರಕ್ಕೆ ಆಗಮಿಸಿದ ಸಾವಿರಾರು ಪರವೂರ ಭಕ್ತರು, ಊರಭಕ್ತಾದಿಗಳು ಬಿರುಬಿಸಿಲಿನ ಬೇಗೆಯನ್ನು ಲೆಕ್ಕಿಸದೇ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಉತ್ಸವ, ರಥಾರೋಹಣ ವೀಕ್ಷಿಸಿ ಸಂಭ್ರಮಿಸಿದರು. ಧನ್ಯತಾಭಾವ ಪ್ರಕಟಗೊಂಡು ಇಷ್ಟಾರ್ಥ ನೆರವೇರಲು ಪ್ರಾರ್ಥಿಸಿಕೊಂಡರು. ಅನ್ನಪ್ರಸಾದದ ವ್ಯವಸ್ಥೆ, ಭಕ್ತರಿಗೆ ವಸತಿ, ವಾಹನ ನಿಲುಗಡೆ, ಕುಡಿಯುವ ಶುದ್ಧ ನೀರಿನ ವ್ಯವಸ್ಥೆಯನ್ನು ಶ್ರೀಮಠದಿಂದ ಕಲ್ಪಿಸಲಾಗಿತ್ತು.

ಕಂಬದಹಳ್ಳಿ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಸೋಂದಾ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ದಿವ್ಯ ಉಪಸ್ಥಿತಿಯನ್ನು ನೀಡಿ, ಭಕ್ತರನ್ನು ಹರಸಿದರು. ಅಲಂಕೃತ ಗಜ ಐಶ್ವರ್ಯ, ಅಶ್ವ ಮಾನವಿ ಶ್ರೀದೇವರ ರಥೋತ್ಸವ ಮಹೋತ್ಸವದಲ್ಲಿ ವಿಶೇಷ ಮೆರಗು ನೀಡಿತ್ತು.

ಮಹಾರಥೋತ್ಸವದಂದು ಸಂಜೆ 09 ಕ್ಕೆ ಶ್ರೀಕ್ಷೇತ್ರದ ಮಕ್ಕಳಿಂದ ನೃತ್ಯ ಪ್ರದರ್ಶನ ನಂತರ ಯಕ್ಷಗಾನ ತಾಳಮದ್ದಳೆ ಹೆಬ್ರಿಯ ಚಾರದ ಶ್ರೀ ಮಹಿಷಮರ್ಧಿನಿ ಯಕ್ಷ ಕಲಾ ಪ್ರತಿಷ್ಠಾನದ ಕಲಾವಿದರಿಂದ **'ಯಶೋಧರ ಚರಿತ್ರೆ-ಪದ್ಮಾವತಿ ಮಹಾತ್ಮೆ'** ಯಕ್ಷಗಾನ ತಾಳಮದ್ದಳೆ ಪ್ರಸಂಗವನ್ನು ಪ್ರಸ್ತುತ ಪಡಿಸಿದರು.

### ಪ್ರಕೃತಿಯ ಆರಾಧನೆ : ಸಿಂಹವಾಹನೋತ್ಸವದ ಸಂದೇಶ

## "ಆರೋಗ್ಯದಾಯಕ ಪರಿಸರ ಪಸರಿಸಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ:** ಕ್ಷೇತ್ರದಲ್ಲಿ ಸಂಪ್ರದಾಯದಂತೆ ವಾರ್ಷಿಕ ರಥಯಾತ್ರಾ ಮಹೋತ್ಸವದ ಅಂಗವಾಗಿ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಹಾಗೂ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಜಿನಾಗಮ ಪೂರ್ವ ಪದ್ಧತಿಯಂತೆ ವಿಶೇಷ ಪೂಜಾವಿಧಿಗಳು ನೆರವೇರಿತು.

ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹಾಗೂ ಮುನಿಶ್ರೀ 108 ಅಮರಕೀರ್ತಿ ಮಹಾರಾಜರು ಪೂಜಾ ವಿಧಿ-ವಿಧಾನ, ಕಲಿಕುಂಡ ಯಂತ್ರಾರಾಧನೆ ಸಾನಿಧ್ಯ ನೀಡಿದರು. ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹೊಂಬುಜ ಶ್ರೀಕ್ಷೇತ್ರದ ಮಠದ ಜಿನಮಂದಿರದ ಶ್ರೀ ನೇಮಿನಾಥ ಸ್ವಾಮಿ, ಮಕ್ಕಳ ಬಸದಿಯ ಶ್ರೀ ಪಾರ್ಶ್ವನಾಥ ಸ್ವಾಮಿ, ನಗರ ಜಿನಾಲಯದ ಶ್ರೀ ಆದಿನಾಥ ಸ್ವಾಮಿ ಮತ್ತು ಬೋಗಾರ ಬಸದಿಯ ತೀರ್ಥಂಕರ ಸನ್ನಿಧಿಯಲ್ಲಿ ಕ್ರಮವಾಗಿ ಗಣಧರವಲಯ ಆರಾಧನೆ, ಕಲ್ಯಾಣ ಮಂದಿರ ಆರಾಧನೆ, ಭಕ್ತಾಮರ ಆರಾಧನೆ, ಚೌಷಟ್ ಋದ್ಧಿ ವಿಧಾನ ನೆರವೇರಿಸಿದರು.

ದ್ವಿತೀಯ ದಿನದಂದು ಸಿಂಹವಾಹನೋತ್ಸವವು ಭಕ್ತಾದಿಗಳ ಜಯಘೋಷದೊಂದಿಗೆ ನಗರ ಪ್ರದಕ್ಷಿಣೆಯನ್ನು ಶಾಸ್ತ್ರಬದ್ಧವಾಗಿ ಜರುಗಿಸಲಾಯಿತು. ಪೂಜ್ಯಶ್ರೀಗಳವರು ಪ್ರಕೃತಿಯ ಆರಾಧನೆಯ ಅಂಗವಾಗಿ ಮೃಗರಾಜ ಸಿಂಹ ಸಾಂಕೇತಿಕವಾಗಿ, ಶ್ರೀದೇವರ ಯಾತ್ರೆಯನ್ನು ಸಿಂಹವಾಹನೋತ್ಸವದಲ್ಲಿ ನೆರವೇರಿಸಲಾಗುವುದು. ನಾಗವಾಹನೋತ್ಸವವು ಪ್ರಥ್ವಿಯ ಜಲನಿಧಿಯ ಸಂಕೇತವಾಗಿದ್ದು, ಶ್ರೀಕ್ಷೇತ್ರ ಹೊಂಬುಜದ ರಥಯಾತ್ರೆಯು ಪ್ರಕೃತಿಯ ಜೀವರಾಶಿಯ ಆರಾಧನೆಯೇ ಆಗಿದೆ ಎಂಬ ಸಂದೇಶ ನೀಡಿದರು. ಪರಿಸರ ಸಂರಕ್ಷಣೆ, ಅನ್ಯೋನ್ಯ ಬಾಂಧವ್ಯದ ಅನುಕರಣೆ ಮಾಡುವುದು ಆರೋಗ್ಯದಾಯಕ ಸಮಾಜ ನಿರ್ಮಾಣದ ಬುನಾದಿ ಎಂದು ಭಕ್ತರನ್ನು ಹರಸಿದರು.

ಪವನ್ ಕುಮಾರ್ ರಾರಾ ಸಹೋದರಿಯರು ತೀನ್‌ಸುಕಿಯಾ (ಅಸ್ಸಾಂ) ಅವರು ಸೇವಾಕರ್ತರಾಗಿದ್ದು ಪೂಜ್ಯ ಸ್ವಾಮೀಜಿಯವರು ಆಶೀರ್ವದಿಸಿದರು.

### ಬೆಳ್ಳಿ-ಪುಷ್ಪರಥಯಾತ್ರಾ ಉತ್ಸವ-ಶ್ರದ್ಧಾ ಭಕ್ತಿಯಿಂದ ಧರ್ಮ ಸೇವೆ



**ಹೊಂಬುಜ:** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ವಾರ್ಷಿಕ ರಥೋತ್ಸವದ ನಿಮಿತ್ತ ತೃತೀಯ ದಿನದಂದು ನಿತ್ಯವಿಧಿ ಸಹಿತ ಜಲಾಗ್ನಿ ಹೋಮ, ಶಾಂತಿಚಕ್ರಾರಾಧನೆ, ಶ್ರೀಬಲಿ ಪರಂಪರೆಯಂತೆ ಪರಮಪೂಜ್ಯ ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರ ಹಾಗೂ ಮುನಿಶ್ರೀ 108 ಅಮರಕೀರ್ತಿ ಮಹಾರಾಜರ ಸಾನಿಧ್ಯದಲ್ಲಿ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯ ನೇತೃತ್ವ, ಮಾರ್ಗದರ್ಶನದಲ್ಲಿ ಸಾಂಗವಾಗಿ ಆಯೋಜಿಸಲ್ಪಟ್ಟಿತು.

ಜೈನಾಗಮ ಪೂರ್ವಪದ್ಧತಿಯಂತೆ ಬೆಳ್ಳಿ-ಪುಷ್ಪ ರಥೋತ್ಸವವು ಉತ್ಸವ ಮೂರ್ತಿಗಳ ಅಲಂಕಾರದೊಂದಿಗೆ, ಸಕಲ ವಾದ್ಯಗೋಷ್ಠಿಯೊಂದಿಗೆ ನೆರವೇರಿತು. ಸೇವಾಕರ್ತರಾದ ಸರೋಜ್, ಸರಿತಾ, ನವೀನ್ ಬಗಡಾ ಸೇಲಂ, ರಾಜೇಂದ್ರ ಸುಮನ್ ಛಾಬ್ರಾ, ಪ್ರತೀಕ್ ನಕುಲ್ ಜೈನ್ ಛಾಬ್ರಾ ಉಪಸ್ಥಿತರಿದ್ದರು. ಸ್ವಸ್ತಿಶ್ರೀಗಳವರು ಸೇವೇಕರ್ತರನ್ನು, ಭಕ್ತರನ್ನು ಹರಸಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದ ಭಕ್ತರು ಇಷ್ಟಾರ್ಥ ಸೇವೆ ಸಲ್ಲಿಸಿದರು. ನಿಷಿಧಿ ಸ್ಥಳಕ್ಕೆ ಪಲ್ಲಕ್ಕಿ ಉತ್ಸವ ತೆರಳಿ ಪೂಜೆ ಸಲ್ಲಿಸಲಾಯಿತು.

### "ಕುಂದಾದ್ರಿ ಕ್ಷೇತ್ರ: ಭಾವಶುದ್ಧಿಯ ಪ್ರೇರೇಪಿಸುವ ದಿವ್ಯಸನ್ನಿಧಿ"

**1ನೇ ಪುಟದಿಂದ**

ಕಲಿಕುಂಡ ಆರಾಧನೆ, ವಿಶೇಷ ಅಭಿಷೇಕ ಪೂಜೆಯುನ್ನು ಆಯೋಜಿಸಿದ್ದರು. ಮುನಿಶ್ರೀಗಳವರನ್ನು ಸಾಂಪ್ರದಾಯಕವಾಗಿ ಸ್ವಾಗತಿಸಿ, ಕುಂದಾದ್ರಿಯ ಅಭಿವೃದ್ಧಿ ಪಕ್ಷಿನೋಟವನ್ನು ವಿವರಿಸುತ್ತಾ, ಭಕ್ತರಿಗೆ ವಿಶಿಷ್ಟ ಧರ್ಮಾಮೃತ ನೀಡುವ ಕ್ಷೇತ್ರವೆಂದರು.

ಡಾ. ಜೀವಂಧರ ಜೈನ್, ಸಿ.ಡಿ. ಅಶೋಕ ಕುಮಾರ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಪದ್ಮಾವತಿ ದೇವಿ ಅನುಗ್ರಹ ಅನನ್ಯ :

# "ಜೈನ ಧರ್ಮ ಪ್ರಭಾವನಾ ಪವಿತ್ರ ತೀರ್ಥಕ್ಷೇತ್ರ"

-ಮುನಿಶ್ರೀಗಳವರು



**ಹೊಂಬುಜ : ಶ್ರೀ ಪದ್ಮಾವತಿ ದೇವಿ ಅನುಗ್ರಹ ಅನನ್ಯ, ಜೈನ ಧರ್ಮ ಪ್ರಭಾವನಾ ಪವಿತ್ರ ತೀರ್ಥಕ್ಷೇತ್ರ ಹೊಂಬುಜ ಶ್ರೀಕ್ಷೇತ್ರದಲ್ಲಿ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಆರಾಧನಾ ಪುಣ್ಯಪ್ರದಾಯಿನಿ ಸನ್ನಿಧಿಯಾಗಿದೆ** ಎಂದು ಮುನಿಶ್ರೀ 108 ಅಮರಕೀರ್ತಿ ಮಹಾರಾಜರು ತಿಳಿಸಿದರು.

ವಾರ್ಷಿಕ ರಥೋತ್ಸವ ಅಂಗವಾಗಿ 'ಸಿದ್ಧಾಂತಕೀರ್ತಿ' ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುನಿಶ್ರೀಗಳವರು ಜೈನ ಧರ್ಮ ತತ್ವಗಳು ವಿಶ್ವವ್ಯಾಪಿ ಶಾಂತಿಗಾಗಿ ಆಧಾರಸ್ತಂಭವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರು ಹೊಂಬುಜ ಅತಿಶಯ ಕ್ಷೇತ್ರವು ಸರ್ವಧರ್ಮ ಸಮನ್ವಯದ ಅಪೂರ್ವ ಜೈನ ತೀರ್ಥವಾಗಿದ್ದು, ಅಭೀಷ್ಟವರ ಪ್ರದಾಯಿನಿ ಯಕ್ಷಿಶ್ರೀ ಪದ್ಮಾವತಿ ದೇವಿ ಅನುಗ್ರಹ ಯಾಚಿಸುವವರು ಜೀವನ ಮುಕ್ತಿಯ ಪಥ ಅನುಸರಿಸುತ್ತಾರೆ ಎಂದು ಭಕ್ತರ ಅಪೇಕ್ಷೆ, ನಿರೀಕ್ಷೆಗಳು ಫಲಿಸಲೆಂದು ಹರಸಿದರು. ಆರ್ಯಿಕಾ 105 ಪದ್ಮಶ್ರೀ ಮಾತಾಜಿ ಉಪಸ್ಥಿತರಿದ್ದರು.

"ಸಿದ್ಧಾಂತಕೀರ್ತಿ ಪ್ರಶಸ್ತಿ"ಯನ್ನು ಸ್ವೀಕರಿಸಿದ ಹಿರಿಯ ಜೈನ ವಿದ್ವಾಂಸ ಬ್ರ. ಶ್ರೀ ರತನಚಂದ ಕೋಟಿಯವರು ಜೈನ ಪ್ರಭಾವನಾ ಅಂಗವಾಗಿ ಸ್ವಾಧ್ಯಾಯ, ಜಪ, ತಪಗಳಿಂದ ವೈಯುಕ್ತಿಕ ಕಲ್ಯಾಣ ಸಾಧ್ಯ ಎನ್ನುತ್ತಾ ಶ್ರೀ ಪದ್ಮಾವತಿ ದೇವಿಯ ನಾಮಸ್ಮರಣೆಯಿಂದ ಸರ್ವರಲ್ಲಿ ಸಾಮರಸ್ಯ, ಸಹೋದರತ್ವ ನಿರ್ಮಾಣವಾಗುತ್ತದೆ. ಜೈನ ಸಾಹಿತ್ಯದ ಮರ್ಮವು ಲೋಕಕಲ್ಯಾಣ ಮಾರ್ಗದ ದಿಕ್ಸೂಚಿ ಎಂದರು.

ಹೊಬುಜ ಶ್ರೀಗಳವರು ಪೂರ್ವ ಪರಂಪರೆಯ ಜೈನಾಗಮ ಪದ್ಧತಿಯಿಂದ ಹೊಂಬುಜ ಕ್ಷೇತ್ರದಲ್ಲಿ ಧಾರ್ಮಿಕ ವಿಧಿ-ವಿಧಾನಗಳು ಭಕ್ತರ ಇಷ್ಟಾರ್ಥ ನೆರವೇರಿಸುವ ಅಂಗವಾಗಿದೆ. ಸಾಹಿತ್ಯ, ಕಲೆ, ಶಿಕ್ಷಣ, ಆರೋಗ್ಯ, ಪರಿಸರ ರಕ್ಷಣೆ ಕುರಿತು ನಿರಂತರ ಶ್ರೀಕ್ಷೇತ್ರದಲ್ಲಿ ಸಮಾಜಾಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 'ಭಕ್ತರ ಆಶಯ ಈಡೇರಿಸುವ ಧರ್ಮ ದೀಪಿಕೆಯಾಗಿ ಶ್ರೀಕ್ಷೇತ್ರ ಬೆಳಗುತ್ತಿದೆ' ಎಂಬ ವಿಚಾರವನ್ನು ತಿಳಿಸಿದರು.

WWW.HOMBUJAPADMAVATI.ORG

ಕುಂಬದಹಳ್ಳಿ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ 'ಹೊಂಬುಜ ಶ್ರೀಕ್ಷೇತ್ರವು ಗುರುಕುಲ' ಎಂಬಂತಾಗಿದೆ ಎಂದು ತಮ್ಮ ವಿದ್ಯಾಭ್ಯಾಸದ ದಿನಗಳ ಸ್ಮರಣೆ' ಮಾಡಿದರು. ಸೋಂದಾ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮಿಗಳು 'ಭಕ್ತರು ಸಮರ್ಪಿಸುವ ಶ್ರದ್ಧಾ ಭಕ್ತಿಗಳು ಸಂಕಷ್ಟ ಪರಿಹಾರ ಮಾಡುತ್ತವೆ' ಎಂದು ಶ್ರೀಕ್ಷೇತ್ರದ ಐತಿಹ್ಯವನ್ನು ತಿಳಿಸಿ ಹರಸಿದರು.

### ಭಕ್ತಿಗೀತೆ ಧ್ವನಿಸುರುಳಿ ಲೋಕಾರ್ಪಣೆ

ಧರ್ಮಸ್ಥಳ ಮಾತೃಶ್ರೀ ಹೇಮಾವತಿ ವೀರೇಂದ್ರ ಹೆಗ್ಗಡೆಯವರು ರಚಿಸಿದ ಭಕ್ತಿಗೀತೆ ಧ್ವನಿಸುರುಳಿಯನ್ನು ಯುಗಲ ಮುನಿಮಹಾರಾಜರು ಬಿಡುಗಡೆಗೊಳಿಸಿದರು. ಪ್ರಿಯಾ ಪಿ. ಜೈನ್, ಪೂಜ್ಯ ಮೋಹನ ಗಾಯಕಿಯರಾಗಿ ಭಕ್ತಿಗೀತೆ ಹಾಡಿರುವರು. ಸಂಸೆಯ ಜ್ಯೋತಿ ಜೈನರವರ ಅಕ್ಷರವಾಣಿ ಯುಟ್ಯೂಬ್ ಚಾನಲ್‌ನ ಡವಳಾರ ಸೇವೆಯ ಭಕ್ತಿಗೀತೆ ಬಿಡುಗಡೆಗೊಳಿಸಲಾಯಿತು. ನೃತ್ಯ ಸೇವೆಯನ್ನು ಸ್ಮಿತಿ (ಸರಸ್ವತಿ ವಂದನಾ) ನಿಧಿ (ನೃತ್ಯನಮನ) ಮನೋಹರವಾಗಿ ಪ್ರದರ್ಶಿಸಿದರು.

ನೂತನ ಚಂದ್ರಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ಪ್ರಾರ್ಥನೆಯನ್ನು ಅಮೃತ ಸಂಗಡಿಗರು, ಸ್ವಾಗತವನ್ನು ಆಡಳಿತಾಧಿಕಾರಿ ಸಿ.ಡಿ. ಅಶೋಕ ಕುಮಾರ್, ಪ್ರಶಸ್ತಿ ಪುರಸ್ಕೃತರ ಪರಿಚಯವನ್ನು ಹೆಚ್.ಬಿ. ಸಂತೋಷ್ ಕುಮಾರ್, ಪ್ರಶಸ್ತಿ ಪತ್ರ ವಾಚನವನ್ನು ಶ್ರೀಧರ ಬೆಂಗಳೂರು ಮಾಡಿದರು. ಕಾರ್ಯಕ್ರಮವನ್ನು ಶ್ರೀಮತಿ ಪೂರ್ಣಿಮಾ ನಿರೂಪಿಸಿದರು. ಕರ್ನಾಟಕ ರಾಜ್ಯದ ವಿವಿಧೆಡೆಯಿಂದ ಮಹಾರಾಷ್ಟ್ರ, ತಮಿಳುನಾಡು, ಅಸ್ಸಾಂ, ಮುಂತಾದೆಡೆಯಿಂದ ಭಕ್ತರು ಆಗಮಿಸಿದ್ದರು.



ತ್ರಿಕೂಟ ಜಿನಾಲಯದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿಗೆ ಮಹಾಭಿಷೇಕ-ಸಂಘ ಪೂಜೆ

# 'ಭಗವಂತರಿಗೆ ಮಹಾಭಿಷೇಕದಿಂದ ಧರ್ಮಪ್ರಭಾವನೆ'

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** ತ್ರಿಕೂಟ ಜಿನಮಂದಿರದಲ್ಲಿ ಭ. ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಶಾಂತಿನಾಥ ಸ್ವಾಮಿ, ಶ್ರೀ ಬಾಹುಬಲಿ ಸ್ವಾಮಿ ಏಕಶಿಲಾ ವಿಗ್ರಹಗಳಿಗೆ 108 ಕಲಶಗಳ ಮಹಾಭಿಷೇಕವನ್ನು ವಾರ್ಷಿಕ ರಥೋತ್ಸವದ ಐದನೇಯ ದಿನದಂದು ಭಕ್ತಾದಿಗಳು ನೆರವೇರಿಸಿದರು.

ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಕಂಬದಹಳ್ಳಿ ಶ್ರೀ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ಉಪಸ್ಥಿತಿಯಲ್ಲಿ ನಿತ್ಯವಿಧಿ ಸಹಿತ, ಗುಡ್ಡದ ಬಸದಿ (ತ್ರಿಕೂಟ ಜಿನಾಲಯ) ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿಗೆ ಆಗಮೋಕ್ತ ಶಾಸ್ತ್ರದನ್ವಯ ಮಹಾಭೀಷೇಕ ಮಾಡಲಾಯಿತು. ಶ್ರೀ ಧರಣೇಂದ್ರ ಯಕ್ಷ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಪೂಜಾ ವಿಧಿ ನಡೆಯಿತು.

ಶ್ರೀ ಪಾರ್ಶ್ವನಾಥ ಸ್ವಾಮಿಯ ಅನುಗ್ರಹದಿಂದ ಸದಾ ಭಕ್ತರಿಗೆ ವಿಘ್ನ-ಸಂಕಷ್ಟಗಳು ದೂರವಾಗಲಿ ಮತ್ತು ಜೀವನದಲ್ಲಿ ಜಿನಧರ್ಮ ಪಥವು ಆರೋಗ್ಯದಾಯಕವಾಗಿರಲಿ ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಆಶೀರ್ವಚನ ನೀಡಿದರು. ಸೇವಾಕರ್ತರಾದ ಬೆಂಗಳೂರಿನ ಶ್ರೀಮತಿ ರೂಪಲ್ ಜೈನ್, ಶ್ರೀ ರಜನೀಶ್ ಜೈನ್ ಪೂಜಾ ವಿಧಿ-ವಿಧಾನಗಳಲ್ಲಿ ಪಾಲ್ಗೊಂಡರು. ಹುಬ್ಬಳ್ಳಿ, ಕೊಪ್ಪಳ, ಶಿವಮೊಗ್ಗ, ಬೆಳಗಾವಿ, ವಿಜಯಪುರ, ವಯನಾಡ್, ಮಂಗಳೂರು-ಉಡುಪಿ ಜಿಲ್ಲಾ ಜೈನ ಸಮಾಜದವರು ಭಾಗಿಗಳಾದರು.

ಧ್ವಜಾವರೋಹಣದೊಂದಿಗೆ ರಥೋತ್ಸವ ಸಂಪನ್ನ

# 'ಭಕ್ತರ ಸದೀಚ್ಛೆ ಧರ್ಮಪಥದಲ್ಲಿರಲಿ' ಹೊಂಬುಜ ಶ್ರೀಗಳು



**ಹೊಂಬುಜ :** ಶ್ರೀಕ್ಷೇತ್ರದಲ್ಲಿ ಪರಂಪರಾಗತ ವಾರ್ಷಿಕ ರಥೋತ್ಸವ ಮಹೋತ್ಸವವು ಆರು ದಿನಗಳ ಪರ್ಯಂತ ವಿವಿಧ ಜಿನಾಗಮ ಶಾಸ್ತ್ರೋಕ್ತ ಪೂಜೆ, ಆರಾಧನೆ, ಉತ್ಸವಾದಿಗಳು ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನಿತ್ಯವಿಧಿ ಸಹಿತ ಪೂಜಾ ವಿಧಾನಗಳು, ಕುಂಕುಮೋತ್ಸವವು ಸಾಂಗವಾಗಿ ಏರ್ಪಟ್ಟಿತ್ತು. ಕುಮುದ್ವತಿ ತೀರ್ಥದಲ್ಲಿ ಉತ್ಸವ ಮೂರ್ತಿಯ ಅವಭೃತ ಸ್ನಾನದ ಬಳಿಕ ಸಾಲಾಂಕೃತ ಪಲ್ಲಕ್ಕಿ ಆ ಬಳಿಕ ಗಜವಾಹನದಲ್ಲಿ ಶ್ರೀ ದೇವರ ಬಿಂಬವನ್ನು ಜಿನಾಲಯಕ್ಕೆ ಸ್ವಸ್ತಿಶ್ರೀ ಸ್ವಾಮೀಜಿಯವರು ಬರಮಾಡಿಕೊಂಡರು. ಅಷ್ಟಾವಧಾನದ ನಂತರ ಧ್ವಜಾವರೋಹಣಗೈದು ಶ್ರೀ ಪದ್ಮಾವತಿ ದೇವಿ ಬಿಂಬವನ್ನು ಜಿನಾಲಯದಲ್ಲಿ ಪೂಜಿಸಲಾಯಿತು. ಮಹಾಪೂಜೆಯ ಮಹಾಮಂಗಳಾರತಿ ಸಂದರ್ಭದಲ್ಲಿ ಭಕ್ತರು ಶ್ರೀ ಪದ್ಮಾವತಿ ಮತಾಕೀ ಜೈ, ಶ್ರೀ ಪಾರ್ಶ್ವನಾಥ ಕೀ ಜೈ, ಶ್ರೀ ಜೈನ ಧರ್ಮಕೀ ಜೈ ಎಂದು ಭಕ್ತಿಪೂರ್ವಕ ಜಯಕಾರ ಮೊಳಗಿಸಿದರು.

**ಧರ್ಮ ಸಂದೇಶ : ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತರು ತಮ್ಮ ಜೀವನದಲ್ಲಿ ನಿತ್ಯವೂ ಧರ್ಮಪಥದಲ್ಲಿ ಸಾಗಿದಾಗ ಇಷ್ಟಾರ್ಥ, ಸದೀಚ್ಛೆ ಲಭಿಸುತ್ತದೆ ಎಂಬ ಧರ್ಮ ಸಂದೇಶ ನೀಡಿದರು.**

### ಶ್ರೀ ಕ್ರೋಧಿನಾಮ ಸಂವತ್ಸರ : ಪಂಚಾಂಗ ಶ್ರವಣ

# 'ಸತ್ಯ-ಧರ್ಮ ಪರಿಪಾಲನೆಯಿಂದ ಪ್ರಾಮಾಣಿಕ ಸೇವೆ ಅಗತ್ಯ' ಮಳೆ-ಬೆಳೆ ಸಮೃದ್ಧಿಯಾಗಲಿ' ಹೊಂಬುಜ ಶ್ರೀಗಳು





**ಹೊಂಬುಜ :** ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀ ಜೈನ ಮಠದಲ್ಲಿ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಕ್ಷೇತ್ರಪಾಲ ಸ್ವಾಮಿ ಸನ್ನಿಧಿಯಲ್ಲಿ ಪ್ರಾತಃಕಾಲ ಜಿನದೇವರ ಶ್ರೀಮುಖ ದರ್ಶನವನ್ನು ಭಕ್ತರು ಭಕ್ತಿಭಾವದಿಂದ ಪಡೆದರು. ಶ್ರೀ ಕ್ರೋಧಿನಾಮ ಸಂವತ್ಸರದ ಆರಂಭದ ಶುಭದಿನ ಯುಗಾದಿ ಪಾಡ್ಯವಾಗಿದ್ದು ವಿಶೇಷ ಅಲಂಕಾರ ಪೂಜೆ, ಅಷ್ಟವಿಧಾರ್ಚನೆ ವಿಧಿ-ವಿಧಾನಗಳು ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಜಿನಾಗಮೋಕ್ತ ಪರಂಪರಾಗತ ಪದ್ಧತಿಯಲ್ಲಿ ಪೂಜಾ ವಿಧಾನಗಳು ನೆರವೇರಿದವು. ಮಂಗಳವಾದ್ಯ, ಪುರೋಹಿತರಿಂದ ಮಂತ್ರಪಠಣ, ಭಕ್ತರಿಂದ ನಿತ್ಯ ಸ್ತೋತ್ರ ಪಠಣ ಸಾಂಗವಾಗಿ ನಡೆಯಿತು.

ಗೋಧೂಳಿ ಮುಹೂರ್ತದಲ್ಲಿ ಶ್ರೀ ಪಂಚಾಗ ಶ್ರವಣ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಗಳು **'ಜೈನಧರ್ಮದನ್ವಯ ಜ್ಯೋತಿಷ್ಯ ಶಾಸ್ತ್ರದ ಪಂಚಾಂಗವು ಸರ್ವರ ಜೀವನವನ್ನು ಸಂಕಷ್ಟದಿಂದ ದೂರವಿಡಲು ಸಕಾರಾತ್ಮಕ ಮಾರ್ಗದರ್ಶಕ'** ಎಂದು ವಿವರಿಸುತ್ತಾ **'ನಿತ್ಯ ಜೀವನದಲ್ಲಿ ಸಾತ್ವಿಕ ಧರ್ಮ ಪಾಲನೆಯಿಂದ ಶಿಕ್ಷಣ, ಕೃಷಿ, ಉದ್ಯಮ, ವಾಣಿಜ್ಯ, ವೈದ್ಯಕೀಯ ತಂತ್ರಜ್ಞಾನದ ಸಂಶೋಧನೆಗೆ ಪಂಚಾಂಗವು ನಾಂದಿ'** ಎಂಬ ವಿಚಾರವನ್ನು ತಿಳಿಸಿದರು. ಸರ್ವರಿಗೂ ಶ್ರೀ ಕ್ರೋಧಿನಾಮ ಸಂವತ್ಸರ ಶಾಂತಿ-ನೆಮ್ಮದಿ ಆರೋಗ್ಯ ವರ್ಧಿಸಲಿ ಎಂದು ಹರಸಿದರು.

**'ಕ್ರೋಧವನ್ನು ತ್ಯಜಿಸಿ ಪೂಜೆ, ತಪ, ಸ್ವಾಧ್ಯಾಯಗಳಿಂದ ಸಂವತ್ಸರದಲ್ಲಿ ಶುಭ ಕಾರ್ಯಗಳು ನೆರವೇರಲಿ, ರಾಷ್ಟ್ರ ಸಮೃದ್ಧಿಯಾಗಲಿ'** ಎಂದು ಹರಸಿದರು. ಪುರೋಹಿತರಾದ ಶ್ರೀ ಪದ್ಮರಾಜ ಇಂದ್ರ, ಭರತ ಇಂದ್ರ, ಹೊಂಬುಜ ಜೈನ ಸಮಾಜ, ಮಹಿಳಾ ಸಮಾಜ, ಆಗಮಿಸಿದ ಭಕ್ತರು ಶ್ರೀಗಳಿಂದ ಶ್ರೀ ಮಂತ್ರಾಕ್ಷತೆ ಸ್ವೀಕರಿಸಿದರು.

WWW.HOMBUJAPADMAVATI.ORG

## ಶ್ರೀ ಕುಂದಕುಂದ ವಿದ್ಯಾಪೀಠಕ್ಕೆ ಪ್ರವೇಶಾವಕಾಶ

ಅತಿಶಯ ಶ್ರೀಕ್ಷೇತ್ರ ಹೊಂಬುಜ ಶ್ರೀಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಶುಭಾಶೀರ್ವಾದದೊಂದಿಗೆ ಜೈನ ಮಠದ ಆಶ್ರಯದಲ್ಲಿ ಸುವ್ಯವಸ್ಥಿತಗೊಂಡಿರುವ ಶ್ರೀಕುಂದಕುಂದ ವಿದ್ಯಾಪೀಠವು ಜೈನ ಬಾಂಧವರ ಪ್ರೋತ್ಸಾಹಕ್ಕೆ ಪಾತ್ರವಾಗಿ ಜೈನ ವಿದ್ಯಾರ್ಥಿಗಳಿಗೆ ಲೌಕಿಕ ಹಾಗೂ ಧಾರ್ಮಿಕ ಶಿಕ್ಷಣ ನೀಡುವಲ್ಲಿ ಯಶಸ್ಸುಗಳಿಸಿ ಪ್ರಗತಿ ಪಥದಲ್ಲಿ ಮುನ್ನಡೆದಿದೆ.

ಮಕ್ಕಳ ಶಿಕ್ಷಣಾಭ್ಯುದಯಕ್ಕೆ ಉತ್ತಮ ವೇದಿಕೆಯಾಗಿರುವ ಶ್ರೀ ಕುಂದಕುಂದ ವಿದ್ಯಾಪೀಠಕ್ಕೆ 5 ರಿಂದ 10ನೇ ತರಗತಿಯವರೆಗಿನ, 2024-25ನೇ ಸಾಲಿನ ಪ್ರವೇಶಕ್ಕೆ ಅವಕಾಶ ಕಲ್ಪಿಸಿ ವಿದ್ಯಾರ್ಥಿಗಳ ನೊಂದಣಿ ಆರಂಭವಾಗಿದೆ. ಜೈನ ಪೋಷಕರು/ತಂದೆ ತಾಯಿಯರು ಬಾಲಕರನ್ನು ಈ ವಿದ್ಯಾಸ್ಫೂರ್ತಿ ಸೆಲೆಯ ವಿದ್ಯಾಪೀಠದ ಪ್ರವೇಶಕ್ಕೆ ತಾವು ಹಿಂದಿನ ತರಗತಿಯ ಉತ್ತೀರ್ಣರಾದ ಅಂಕಪಟ್ಟಿ ಹಾಗೂ ಅಲ್ಲಿಯ ಜೈನ ಸಮಾಜದ ಮುಖಂಡರಿಂದ ಪಡೆದ ಪರಿಚಯ ಪತ್ರ, ಮೂಲ ದಾಖಲೆಗಳೊಂದಿಗೆ ಸಂಪರ್ಕಿಸಬೇಕಾಗಿ ಅಪೇಕ್ಷಿಸಲಾಗಿದೆ.

ವಿಶೇಷ ಸೂಚನೆ: ಶ್ರೀ ಹೊಂಬುಜ ಪದ್ಮಾವತಿ ಎಜುಕೇಷನಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಪರಂಜ್ಯೋತಿ ಆಂಗ್ಲಮಾಧ್ಯಮ ಪ್ರಾಥಮಿಕ ಪಾಠಶಾಲೆಗೆ 8ನೇ ತರಗತಿಯಿಂದ ಅವಕಾಶವಿರುತ್ತದೆ

**ವ್ಯವಸ್ಥಾಪಕರು, ಶ್ರೀಕುಂದ ಕುಂದ ವಿದ್ಯಾಪೀಠ, ಶ್ರೀ ಹೊಂಬುಜ ಜೈನ ಮಠ, ಮೋ: 8123924492, 8762180697, 9481249127, 9481944083**

# ಹೊಂಬುಜ ಜಾತ್ರಾ ಮಹೋತ್ಸವ ಸಂಭ್ರಮ

### ಮಹಾರಥೋತ್ಸವದ ನಿಮಿತ್ತ ಶ್ರೀಕ್ಷೇತ್ರದ ವಿವಿಧ ಬಸದಿಗಳಲ್ಲಿ ಆರಾಧನೆಗಳು ನಡೆದವು











ವಿದ್ಯುತ್ ಅಲಂಕೃತ ಶ್ರೀಕ್ಷೇತ್ರ.



ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math

Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math

Post: Humcha, Tq. Hosanagar., Dist. Shimoga-577436 Ph : 08185-262722